International Journal of Academic Research
ISSN: 2348-7666; Vol.5, Issue-12, December, 2018
Impact Factor: 6.023; Email: drtvramana@yahoo.co.in

# ಭಾರತೀಯ ಮಹಿಳೆ: ಬದಲಾಗುತ್ತಿರುವ ಆಯಾಮಗಳು

**ಸರಸ್ವತಿ.ಕೆ**
**ರಾಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು,**
**ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆಂಗೇರಿ,**
**ಬೆಂಗಳೂರು** 560060.
E mail id- saraswathi.basavaraju@yahoo.com
Mob: 9972192645.

**Abstract:** ಭಾರತದಲ್ಲಿ ಮಹಿಳೆಯರ ಸ್ಥಾನಮಾನವನ್ನು ಐತಿಹಾಸಿಕವಾಗಿ ನೋಡುವುದಾದರೆ ಬಹಳ ಹಿಂದಿನಿಂದಲೂ ಸಮಾನ ಅವಕಾಶವನ್ನು ನಿರಾಕರಿಸಿರುವುದು ಇಲ್ಲವೇ ಎರಡನೆಯ ದರ್ಜೆಯ ಸ್ಥಾನ ನೀಡಿರುವುದು ಕಂಡುಬರುತ್ತದೆ. 19ನೆಯ ಶತಮಾನದಲ್ಲಿ ಮಹಿಳೆಯರಿಗೆ ಪೂಜ್ಯನೀಯ ಶಕ್ತಿ ದೇವತೆ ಎಂಬ ಗೌರವ ಇದ್ದಿತೇ ಹೊರತು ಸಮಾನ ಅವಕಾಶಗಳಿರಲಿಲ್ಲ. ಮಹಿಳೆ ದುರ್ಬಲಳು, ಪುರುಷರ ಮೇಲೆ ಅವಲಂಬಿತಳಾಗಿರಬೇಕು ಎಂಬಂತೆ ನಾಲ್ಕು ಗೋಡೆಗಳ ನಡುವೆ ಅವಳನ್ನು ಜೀವಿಸುವಂತೆ ನಿರ್ಭಂಧಿಸಲಾಗಿತ್ತು.

ಆಧುನಿಕ ಸಮಾಜದಲ್ಲಿ ಮಹಿಳೆ ಎಲ್ಲಾ ರೀತಿಯಲ್ಲೂ ಪುರುಷರ ಒಡನಾಡಿ. ಸಮಾನ ಮಾನಸಿಕ ಸಾಮರ್ಥ್ಯವನ್ನು ಹೊಂದಿದ್ದಾಳೆ. ಶೈಕ್ಷಣಿಕ,ಸಾಮಾಜಿಕ, ರಾಜಕೀಯ, ಆರ್ಥಿಕ ವೈಜ್ಞಾನಿಕ, ತಾಂತ್ರಿಕ, ಕ್ರೀಡಾ ವೈದ್ಯಕೀಯ ಹೀಗೆ ನಾನಾ ಕ್ಷೇತ್ರಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಲು ಸಮಾನ ಹಕ್ಕನ್ನು ಹೊಂದಿದ್ದು ತನ್ನನ್ನು ತೊಡಗಿಸಿಕೊಂಡಿಸಿದ್ದಾಳೆ. ದೇಶದ ಅರ್ಧದಷ್ಟು ಜನಸಂಖ್ಯೆಯನ್ನು ಪ್ರತಿನಿಧಿಸುವ ಮಹಿಳೆಯರು ನಾನಾ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸುವುದರೊಂದಿಗೆ ಪುರುಷರಿಗೆ ಸರಿ ಸಮನಾಗಿ ತಾನೂ ಕಾರ್ಯನಿರ್ವಹಿಸಬಲ್ಲೆ ಎಂಬುದನ್ನು ಸಾಬೀತುಪಡಿಸಿದ್ದಾರೆ.

**ಪ್ರಮುಖ ಅಂಶಗಳು**: ಮಹಿಳೆ, ಭಾರತದ ಸಂವಿಧಾನ, ಕಾಯಿದೆಗಳು, ಭಾರತೀಯ ಸಮಾಜ

**ಪೀಠಿಕೆ:** ದೇಶದ ಅರ್ಧದಷ್ಟು ಜನಸಂಖ್ಯೆಯನ್ನು ಪ್ರತಿನಿಧಿಸುವ ಮಹಿಳೆಯರು ನಾನಾ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸುವುದರೊಂದಿಗೆ ಪುರುಷರಿಗೆ ಸರಿ ಸಮನಾಗಿ ತಾನೂ ಕಾರ್ಯನಿರ್ವಹಿಸಬಲ್ಲೆ ಎಂಬುದನ್ನು ಸಾಬೀತುಪಡಿಸಿದ್ದಾರೆ. ಮಹಿಳೆಯರ ಸ್ಥಾನಮಾನವನ್ನು ಐತಿಹಾಸಿಕವಾಗಿ ನೋಡುವುದಾದರೆ ಬಹಳ ಹಿಂದಿನಿಂದಲೂ ಸಮಾನ ಅವಕಾಶವನ್ನು ನಿರಾಕರಿಸಿರುವುದು ಇಲ್ಲವೇ ಎರಡನೆಯ ದರ್ಜೆಯ ಸ್ಥಾನ ನೀಡಿರುವುದು ಕಂಡುಬರುತ್ತದೆ. 19ನೆಯ ಶತಮಾನದಲ್ಲಿ ಮಹಿಳೆಯರಿಗೆ ಪೂಜ್ಯನೀಯ ಶಕ್ತಿ ದೇವತೆ ಎಂಬ ಗೌರವ ಇದ್ದಿತೇ ಹೊರತು ಸಮಾನ ಅವಕಾಶಗಳಿರಲಿಲ್ಲ. ಮಹಿಳೆ ದುರ್ಬಲಳು, ಪುರುಷರ ಮೇಲೆ ಅವಲಂಬಿತಳಾಗಿರಬೇಕು ಎಂಬಂತೆ ನಾಲ್ಕು ಗೋಡೆಗಳ ನಡುವೆ ಅವಳನ್ನು ಜೀವಿಸುವಂತೆ ನಿರ್ಭಂಧಿಸಲಾಗಿತ್ತು. ಶಿಕ್ಷಣ ನೀಡಿದರೆ ಮುಂದೆ ಗಂಡನ ಮನೆಯಲ್ಲಿ ಪ್ರಶ್ನಿಸುವ, ಕಲಹಕ್ಕೆ ದಾರಿಯಾಗುವ ಸಾಧ್ಯತೆ ಇರುತ್ತದೆಂದು ಹಾಗೂ ಗಂಡನ ಮನೆಗೆ ಹೋಗುವವಳಾಗಿದ್ದರಿಂದ ಗೃಹಕೃತ್ಯದ ತರಬೇತಿಯನ್ನು ಮನೆಯಲ್ಲಿ ಕೆಲಸಕ್ಕೆ ತೊಡಗಿಕೊಂಡಿರಬೇಕೆಂಬ ಮನೋಭಾವ ಸಮಾಜದಲ್ಲಿದ್ದರಿಂದ ಶಿಕ್ಷಣ ವಂಚಿತಳಾಗಿ ಮಾಡಿರುವುದನ್ನು, ಅಸಮಾನತೆಯನ್ನು ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿ ಕಾಣಬಹುದಾಗಿದೆ.

ಆಧುನಿಕ ಸಮಾಜದಲ್ಲಿ ಮಹಿಳೆ ಎಲ್ಲಾ ರೀತಿಯಲ್ಲೂ ಪುರುಷರ ಒಡನಾಡಿ. ಸಮಾನ ಮಾನಸಿಕ ಸಾಮರ್ಥ್ಯವನ್ನು ಹೊಂದಿದ್ದಾಳೆ. ಶೈಕ್ಷಣಿಕ,ಸಾಮಾಜಿಕ, ರಾಜಕೀಯ, ಆರ್ಥಿಕ ವೈಜ್ಞಾನಿಕ, ತಾಂತ್ರಿಕ, ಕ್ರೀಡಾ ವೈದ್ಯಕೀಯ ಹೀಗೆ ನಾನಾ ಕ್ಷೇತ್ರಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಲು ಸಮಾನ ಹಕ್ಕನ್ನು ಹೊಂದಿದ್ದು ತನ್ನನ್ನು ತೊಡಗಿಸಿಕೊಂಡಿಸಿದ್ದಾಳೆ.

International Journal of Academic Research
ISSN: 2348-7666; Vol.5, Issue-12, December, 2018
Impact Factor: 6.023; Email: drtvramana@yahoo.co.in

ಹಾಗಾಗಿಯೇ ಪ್ರಪಂಚಾದ್ಯಂತ ಮಹಿಳಾ ಸಮಾನ ಅವಕಾಶಗಳ ಕುರಿತು ಚರ್ಚೆಗಳು ನಡೆಯುತ್ತಲಿವೆ. ದೇಶದ ಇತಿಹಾಸದ ಪುಟಗಳಲ್ಲಿ ತನ್ನ ಹೆಸರು ಶಾಶ್ವತವಾಗಿ ದಾಖಲೆಗೊಳ್ಳುವಂತಹ ಕಾರ್ಯದಲ್ಲಿ ನಿರತಳಾಗಿದ್ದಾಳೆ. ಮಹಿಳೆಯರ ಪ್ರಾಬಲ್ಯತೆಗೆ ಸಂವಿಧಾನ ಹಾಗೂ ಸರ್ಕಾರ ಒದಗಿಸಿರುವ ವಿಶೇಷ ಅವಕಾಶಗಳು ಯಾವುವು ಹಾಗೂ ಅವುಗಳ ಬಳಕೆಯಲ್ಲಿ ಬದಲಾಗುತ್ತಿರುವ ಆಯಾಮಗಳ ಕುರಿತು ಪ್ರಸ್ತುತ ಲೇಖನದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

## ಉದ್ದೇಶಗಳು:

ಮಹಿಳಾ ಪ್ರಾಬಲ್ಯತೆ : ಮಹಿಳೆಯರ ಪಾಲ್ಗೊಳ್ಳುವಿಕೆಗೆ ಭಾರತದ ಸಂವಿಧಾನ ಹಾಗೂ ಕಾಯಿದೆಗಳು ನೀಡಿರುವ ಅವಕಾಶಗಳು ಬದಲಾಗುತ್ತಿರುವ ಆಯಾಮಗಳು ಕುರಿತು ಅಧ್ಯಯನ ಮಾಡುವುದು.

ಮಹಿಳೆಯರು ತಮ್ಮ ಅವಕಾಶಗಳನ್ನು ಸದ್ವಿನಿಯೋಗ ಪಡಿಸಿಕೊಳ್ಳುವಲ್ಲಿ ಇರುವ ಅಡಚಣೆಗಳು ಯಾವುವು ಎಂಬುದನ್ನು ಪರಿಶೀಲಿಸುವುದು ಹಾಗೂ ಆ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುವುದು.

## ಪೂರ್ವಕಲ್ಪನೆ:

ದೇಶದ ಅಭಿವೃದ್ಧಿಯಲ್ಲಿ ಮಹಿಳಾ ಒಳಗೊಳ್ಳುವಿಕೆಯು ಅತ್ಯಂತ ಅಗತ್ಯಾಂಶಗಳಲ್ಲಿ ಒಂದಾಗಿದೆ

ಭಾರತದಲ್ಲಿ ಐತಿಹಾಸಿಕವಾಗಿ ಗೌರವಯುತವಾದ ಸ್ಥಾನಮಾನಗಳನ್ನು ಹಾಗೂ ಆಧುನಿಕ ಯುಗದಲ್ಲಿ ಸಮಾನ ಅವಕಾಶಗಳನ್ನು ಮಹಿಳೆಯರಿಗೆ ನೀಡಲಾಗಿದೆ. ಆದರೆ ಇಂದಿಗೂ ಮಹಿಳೆಯರು ಅನೇಕ ಸವಾಲುಗಳನ್ನು ಎದುರಿಸುತ್ತಿದ್ದಾರೆ.

## ಅಧ್ಯಯನದ ವಿಧಾನ:

ಮಹಿಳಾ ಸಮಾನ ಅವಕಾಶಗಳ ಕುರಿತು ಅಧ್ಯಯನ ಮಾಡಲು ಐತಿಹಾಸಿಕ ವಿಧಾನವನ್ನು, ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳಲ್ಲಿನ ಒಟ್ಟಾರೆ ದೃಷ್ಟಿಕೋನದ ಬಗೆಗೆ ಅಧ್ಯಯನ ಮಾಡಲು ವಿಶ್ಲೇಷಣಾತ್ಮಕ, ಹೋಲಿಕಾ, ವಿಧಾನಗಳನ್ನು ಅನುಸರಿಸಲಾಗಿದೆ.

## ಸಾಹಿತ್ಯದ ವಿಮರ್ಶೆ:

ಪ್ರಸ್ತುತ ಅಧ್ಯಯನವು ಮೂಲ ದಾಖಲೆಗಳಾದ ಮನುಸ್ಮೃತಿ, ಕೌಟಿಲ್ಯನ ಅರ್ಥಶಾಸ್ತ್ರ, ಪ್ಲೇಟೋವಿನ ರಿಪಬ್ಲಿಕ್, ಗ್ರಂಥಗಳನ್ನು, ಸಂವಿಧಾನ ರಚನಾ ಸಭೆಯ ಚರ್ಚೆಗಳು, ಕುರಿತು ಪ್ರಾಥಮಿಕ ಮೂಲಗಳನ್ನು ಪುಸ್ತಕಗಳು, ನಿಯತಕಾಲಿಕೆಗಳು, ಪತ್ರಿಕೆಗಳು, ಮತ್ತು ವೆಬ್ ಸೈಟ್‌ಗಳಂತಹ ದ್ವಿತೀಯ ಮೂಲಗಳನ್ನು ಆಧರಿಸಿದೆ.

## ವಿವರಣೆ

ಪ್ಲೇಟೋ ತನ್ನ "ದ ರಿಪಬ್ಲಿಕ್" ಗ್ರಂಥದಲ್ಲಿ ಮಹಿಳೆಯರಿಗೆ ಶಿಕ್ಷಣ, ರಾಜ್ಯಾಡಳಿತದಲ್ಲಿ ಸಮಾನ ಅವಕಾಶಗಳನ್ನು ರಾಜ್ಯ ಒದಗಿಸಿಕೊಡಬೇಕೆಂದು ತಿಳಿಸಿದರೆ, ಮನುಸ್ಮೃತಿಯಲ್ಲಿ ಮಹಿಳೆ ಚಿಕ್ಕಂದಿನಲ್ಲಿ ತಂದೆಯ ಆಶ್ರಯದಲ್ಲಿ, ಪ್ರೌಢಾವಸ್ಥೆಯಲ್ಲಿ ಪತಿಯ ಆಶ್ರಯದಲ್ಲಿ, ಮುಪ್ಪಿನಲ್ಲಿ ಮಗನ ಆಶ್ರಯದಲ್ಲಿ ಇರಬೇಕೆಂದು ಹೇಳಿದ್ದಾರೆ. ಇದು ಅನೇಕ ಸ್ತ್ರೀಪರವಾದಿ ಸಂಘಟನೆಗಳ ಟೀಕೆಗೆ ಗುರಿಯಾಗಿರುವುದನ್ನು ಸಹ ಗಮನಿಸಬಹುದಾಗಿದೆ.

## ಭಾರತದಲ್ಲಿ ಮಹಿಳೆಯರಿಗೆ ಇರುವ ಸಂವಿಧಾನಾತ್ಮಕ ಸಮಾನ ಅವಕಾಶಗಳು

ಭಾರತದ ಸಂವಿಧಾನವು ಮಹಿಳೆಯರಿಗೆ ಇರುವ ಶೈಕ್ಷಣಿಕ, ರಾಜಕೀಯ, ಆರ್ಥಿಕ ಅನಾನುಕೂಲಗಳನ್ನು ತಟಸ್ಥಗೊಳಿಸಲು ಅನೇಕ ಸಮಾನ ಅವಕಾಶಗಳನ್ನು ಒದಗಿಸಲು ರಾಜ್ಯಗಳು ಮಹಿಳೆಯರ ಪರವಾಗಿ ಸಕಾರಾತ್ಮಕ ತಾರತಮ್ಯದ ಕ್ರಮಗಳನ್ನು ಅಳವಡಿಸಿಕೊಳ್ಳಲು ಅಧಿಕಾರ ನೀಡುತ್ತದೆ.

ಭಾರತದ ಸಂವಿಧಾನದ 14 ನೆಯ ವಿಧಿಯ ಪ್ರಕಾರ "ಕಾನೂನಿನ ಮುಂದೆ ಸಮಾನತೆ" ಸರ್ಕಾರವು ಕಾನೂನಿನ ಮುಂದೆ ಯಾವುದೇ ವ್ಯಕ್ತಿಗೆ ಸಮಾನತೆಯನ್ನು ಅಥವಾ ಕಾನೂನುಗಳ ಸಮಾನ ರಕ್ಷಣೆಯನ್ನು ನಿರಾಕರಿಸುವುದಿಲ್ಲ ಬದಲಿಗೆ ಕಾನೂನಿನ ಮುಂದೆ ಎಲ್ಲರೂ ಸಮಾನರು"

15 ನೇ ವಿಧಿಯ ಪ್ರಕಾರ ಲಿಂಗದ ಆಧಾರದ ಮೇಲೆ ಯಾವುದೇ ನಾಗರಿಕರ ವಿರುದ್ಧ ರಾಜ್ಯ ತಾರತಮ್ಯ ಮಾಡಬಾರದು ಎಂದು ಘೋಷಿಸುತ್ತದೆ. 15(3) ಮಹಿಳೆಯರ ಪರವಾಗಿ ಸಕಾರಾತ್ಮಕ ತಾರತಮ್ಯದ ಕ್ರಮಗಳನ್ನು ಅಳವಡಿಸಿಕೊಳ್ಳಲು ಅಧಿಕಾರ ನೀಡುತ್ತದೆ. ಮಹಿಳೆಯರ ಪರವಾಗಿ ವಿಶೇಷ ಕಾನೂನುಗಳನ್ನು ಮಾಡಬಹುದು.

16 ನೇ ವಿಧಿಯು ಉದ್ಯೋಗದಲ್ಲಿ ಅವಕಾಶದ ಸಮಾನತೆಯನ್ನು ಖಾತರಿಪಡಿಸುತ್ತದೆ.

39 (ಡಿ) ಪುರುಷರು ಮತ್ತು ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಖಾತರಿಪಡಿಸುತ್ತದೆ.

42 ನೇ ವಿಧಿಯು ಕೆಲಸ ಮತ್ತು ನ್ಯಾಯಯುತ ಮಾನವೀಯ ಪರಿಸ್ಥಿತಿಗಳನ್ನು ಹಾಗೂ ಮಾತೃತ್ವ ಪರಿಹಾರದ ಖಾತ್ರಿಪಡಿಸಿಕೊಳ್ಳಲು ರಾಜ್ಯವನ್ನು ನಿರ್ದೇಶಿಸುತ್ತದೆ.

ದುರ್ಬಲ ವರ್ಗದವರ ಶೈಕ್ಷಣಿಕ, ಆರ್ಥಿಕ ಹಿತಾಸಕ್ತಿಗಳನ್ನು ವಿಶೇಷ ಕಾಳಜಿಯಿಂದ ಉತ್ತೇಜಿಸಲು ಹಾಗೂ ಎಲ್ಲಾ ರೀತಿಯ ಅನ್ಯಾಯ ಮತ್ತು ಶೋಷಣೆಯಿಂದ ಅವರನ್ನು ರಾಜ್ಯ ರಕ್ಷಿಸಬೇಕೆಂದು ಸಂವಿಧಾನದ 46 ನೆಯ ವಿಧಿ ತಿಳಿಸುತ್ತದೆ.

6 ರಿಂದ 14 ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸುವುದು ಜಾರಿಗೆ ತರುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜವಾಬ್ದಾರಿಯಾಗಿದೆ ಎಂಬುದನ್ನು 21 (ಎ ) ವಿಧಿಯು ತಿಳಿಸುತ್ತದೆ.

ಅಲ್ಲದೆ ಮಹಿಳೆಯರ ಘನತೆಗೆ ಧಕ್ಕೆ ತರುವಂತಹ ಅಭ್ಯಾಸವನ್ನು ತ್ಯಜಿಸಲು ಸಂವಿಧಾನವು ಪ್ರತಿ ನಾಗರಿಕರ ಮೇಲೆ 51 (ಎ) ವಿಧಿಯ ಮೂಲಕ ಮೂಲಭೂತ ಕರ್ತವ್ಯವನ್ನು ವಿಧಿಸುತ್ತದೆ.

1993 ರಲ್ಲಿ ಭಾರತ ಸರ್ಕಾರವು ಸಂವಿಧಾನಕ್ಕೆ 73 ಮತ್ತು 74 ನೆಯ ತಿದ್ದುಪಡಿಯ ಮೂಲಕ ಕಾಯಿದೆಯನ್ನು ತರುವುದರ ಮೂಲಕ ಪಂಚಾಯಿತಿ ಮಟ್ಟದಲ್ಲಿ ಮಹಿಳೆಯರ ಪರಿಣಾಮಕಾರಿ ಭಾಗವಹಿಸುವಿಕೆಗೆ ದಾರಿ ಮಾಡಿಕೊಟ್ಟಿವೆ ಅಲ್ಲದೆ 243 ನೆಯ ( ಡಿ ) ವಿಧಿಯು ಪ್ರತಿ ಪಂಚಾಯಿತಿಯಲ್ಲಿ ಮೂರನೆಯ ಒಂದು ಭಾಗದ ಸ್ಥಾನಗಳ ಮೀಸಲಾತಿಯನ್ನು ಮಹಿಳೆಯರಿಗೆ ನೀಡಲು ಅವಕಾಶ ಕಲ್ಪಿಸಿದೆ. ಇದು ಮಹಿಳೆಯರ ರಾಜಕೀಯ ಪ್ರಾತಿನಿಧ್ಯಕ್ಕೆ ಅವಕಾಶವನ್ನಿತ್ತಿದೆ. ಸ್ಥಳೀಯ ಸರ್ಕಾರಗಳಲ್ಲಿ ಮಹಿಳಾ ಪ್ರತಿನಿಧಿಗಳಿದ್ದಾರೆ.

ಮಹಿಳೆಯರನ್ನು ಮತ್ತು ಅವರ ಹಿತಾಸಕ್ತಿಗಳನ್ನು ಕಾಪಾಡಲು ವಿಶೇಷ ನಿಬಂಧನೆಗಳನ್ನು ಕಾಯಿದೆಗಳ ಮೂಲಕ ಜಾರಿಗೊಳಿಸಲಾಗಿದೆ.

**ವರದಕ್ಷಿಣೆ ನಿಷೇಧ ಕಾಯಿದೆ-1961-** ಈ ಕಾಯಿದೆಯನ್ವಯ ವರದಕ್ಷಿಣೆ ತೆಗೆದುಕೊಳ್ಳುವುದು ಮತ್ತು ನೀಡುವುದಕ್ಕೆ ಕನಿಷ್ಠ ಐದು ವರ್ಷಗಳ ಜೈಲು ಶಿಕ್ಷೆ ವಿಧಿಸುತ್ತದೆ.

**ಮಾತೃತ್ವ ಸೌಲಭ್ಯ ಕಾಯಿದೆ-1961-** ಈ ಕಾಯಿದೆಯನ್ವಯ ಮಹಿಳಾ ನೌಕರರು ವೇತನ ಸಹಿತ ಪ್ರಸೂತಿ ರಜೆಯನ್ನು ಪಡೆಯುವ ಅವಕಾಶವಿದೆ.

**ಗರ್ಭಧಾರಣೆಯ ವೈದ್ಯಕೀಯ ನಿಯಮ -1961-** ಈ ಕಾಯಿದೆಯನ್ವಯ ಗರ್ಭದಲ್ಲಿರುವ ಮಗುವಿನ ಲಿಂಗ ಪತ್ತೆ ಮಾಡಿ ಗರ್ಭಪಾತ ಮಾಡುವುದು ಶಿಕ್ಷಾರ್ಹ ಅಪರಾಧ

**ಮಾನವ ಕಳ್ಳಸಾಗಣೆ ನಿಷೇಧ ನಿಯಮ-1956-** ಮಹಿಳೆಯರನ್ನು ಮತ್ತು ಮಕ್ಕಳನ್ನು ಕಳ್ಳಸಾಗಣೆ ಮಾಡುವವರಿಗೆ ಭಾರಿ ಶಿಕ್ಷೆ ವಿಧಿಸುತ್ತದೆ.

**ಸಮಾನ ವೇತನ ಕಾಯಿದೆ-1976-** ಈ ಕಾಯಿದೆಯನ್ವಯ ಮಹಿಳೆಯರು ಮತ್ತು ಪುರುಷರಿಗೆ ತಾರತಮ್ಯ ಮಾಡದೆ ಸಮಾನ ವೇತನ ನೀಡಬೇಕು

**ಮಹಿಳೆಯರ ಅನುಚಿತ ಪ್ರಾತಿನಿಧ್ಯದ ನಿಷೇಧ ಕಾಯಿದೆ-1986-** ಈ ಕಾಯಿದೆಯನ್ವಯ ಮಹಿಳೆಯರ ಅನುಚಿತ ಪ್ರಾತಿನಿಧ್ಯವನ್ನು ನಿಷೇಧಿಸುತ್ತದೆ. ಕಾಯಿದೆಯ ಉಲ್ಲಂಘನೆಗಾಗಿ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗುತ್ತದೆ.

**ಮಹಿಳೆಯರ ಕೌಟುಂಬಿಕ ದೌಜಾನ್ಯದಿಂದ ರಕ್ಷಣಾ ಕಾಯಿದೆ**-2005 ಈ ಕಾಯಿದೆಯನ್ವಯ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ ಶಿಕ್ಷಾರ್ಹ ಅಪರಾಧವೆನಿಸಿದೆ.

**ಉದ್ಯೋಗ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯ ವಿರೋಧಿ ಕಾಯ್ದೆ**-ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ದೌರ್ಜನ್ಯ ಎಸಗುವವರ ವಿರುದ್ಧ ಕ್ರಮ ಕೈಗೊಳ್ಳಲು ಈ ಕಾಯಿದೆ ಅನ್ವಯವಾಗುತ್ತದೆ

**ಬಾಲ್ಯ ವಿವಾಹ ವಿರೋಧಿ ಕಾಯಿದೆ-2006**-ಯಾವುದೇ ಬಾಲ್ಯ ವಿವಾಹವನ್ನು ನಿರ್ವಹಿಸುವ, ನಿರ್ದೇಶಿಸುವ ಅಥವಾ ಬೆಂಬಲಿಸುವವರಿಗೆ ದಂಡ ವಿಧಿಸಲು ಪ್ರಯತ್ನಿಸುತ್ತದೆ. ಇದಕ್ಕೆ ಸಂಭಂಧಿಸಿದಂತೆ ಪೋಲಿಸರಿಗೆ, ಅಥವಾ ಮಕ್ಕಳ ಕಲ್ಯಾಣ ಸಮಿತಿಗೆ ದೂರು ನೀಡಬಲಬಹುದು

**ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ವಿರೋಧ ಕಾಯಿದ-2012--18** ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಲೈಂಗಿಕ ಕಿರುಕುಳ, ಅಶ್ಲೀಲ ಚಿತ್ರಗಳ ದೌರ್ಜನ್ಯ ವಿರೋಧ ಕಾಯಿದೆಯನ್ವಯ ಮಕ್ಕಳ ರಕ್ಷಣೆಯನ್ನು ಮಾಡಲಾಗುತ್ತದೆ.

ಮಹಿಳೆಯರ ರಕ್ಷಣೆಗಾಗಿ ಅವರ ಮೇಲಿನ ದೌಜಾನ್ಯದ ವಿರುದ್ಧ ಹಕ್ಕುಗಳನ್ನು ಕಾಪಾಡಲು ಮೇಲ್ವಿಚಾರಣೆ ಮಾಡಲು ಮಹಿಳಾ ರಾಷ್ಟ್ರೀಯ ಆಯೋಗವನ್ನು ಸರ್ಕಾರ ನೇಮಕ ಮಾಡಿದೆ. ಅಷ್ಟೇ ಅಲ್ಲದೆ ಮಹಿಳೆಯರ ಮೇಲಿನ ದೌರ್ಜನ್ಯವನ್ನು ಅಪರಾಧವೆಂದು ನಿರೂಪಿಸಲಾಗಿದೆ. ಮಹಿಳೆಯರ ಮೇಲಿನ ಅಪರಾಧವನ್ನು ನಿಯಂತ್ರಿಸಲು ಅನೇಕ ನಿಯಮಗಳನ್ನು ಜಾರಿಗೆ ತರಲಾಗಿದೆ.

**ಭಾರತೀಯ ಡಂಡ ಸಂಹಿತೆಯಡಿ ಅಪರಾಧಗಳನ್ನು ಗುರುತಿಸಲಾಗಿದೆ.**

ಅತ್ಯಾಚಾರ (ಸೆಕ್ಷನ್ 376 ಭಾರತೀಯ ಡಂಡ ಸಂಹಿತೆ)

ಅಪಹರಣ ಮತ್ತು ವಿವಿದ ಉದ್ದೇಶಗಳಿಗಾಗಿ ಅಡವಿಟ್ಟುಕೊಳ್ಳುವುದು ಅತ್ಯಾಚಾರ (ಸೆಕ್ಷನ್ 363-373 ಭಾರತೀಯ ಡಂಡ ಸಂಹಿತೆ)

ವರದಕ್ಷಿಣೆ,ವರದಕ್ಷಿಣೆ ಕಿರುಕುಳ ಸಾವು (ಸೆಕ್ಷನ್ 302/3034-ಬಿ-ಭಾರತೀಯ ಡಂಡ ಸಂಹಿತೆ)

ಮಾನಸಿಕ ಮತ್ತು ದೈಹಿಕ ಚಿತ್ರಹಿಂಸೆ (ಸೆಕ್ಷನ್ 498 ಭಾರತೀಯ ಡಂಡ ಸಂಹಿತೆ)

ಕಿರುಕುಳ (ಸೆಕ್ಷನ್ 354 ಭಾರತೀಯ ಡಂಡ ಸಂಹಿತೆ)

ಲೈಂಗಿಕ ದೌರ್ಜನ್ಯ (ಸೆಕ್ಷನ್ 509 ಭಾರತೀಯ ಡಂಡ ಸಂಹಿತೆ)

2011 ರ ಜನಗಣತಿಯ ಪ್ರಕಾರ ಹೆಣ್ಣುಮಕ್ಕಳ ಸಾಕ್ಷರತಾ ಪ್ರಮಾಣದಲ್ಲಿ ಏರಿಕೆಯಾಗಿಚೆ. ಜನನಿ-ಶಿಶು ಸುರಕ್ಷಾ ಕಾರ್ಯಕ್ರಮ, ಸರ್ವ ಶಿಕ್ಷ ಅಭಿಯಾನದಂತಹ ಅನೇಕ ಯೋಜನೆಗಳನ್ನು ಭಾರತ ಸರ್ಕಾರ ಪ್ರಾರಂಭಿಸಿದೆ.ಈ ಎಲ್ಲಾ ಅಂಶಗಳನ್ನು ನೋಡಿದಾಗ ಮಹಿಳೆಯರಿಗಾಗಿ ಸಂವಿಧಾನದಲ್ಲಿ ಅಷ್ಟೇ ಅಲ್ಲದೆ ನಂತರ ಸರ್ಕಾರಗಳು ಕಾಲಾನುಕ್ರಮದಲ್ಲಿ ಅನೇಕ ಕಾಯಿದೆಗಳನ್ನು ಅನುಷ್ಠಾನಕ್ಕೆ ತರುವುದರ ಮೂಲಕ ಮಹಿಳಾ

ಪ್ರಾಬಲ್ಯತೆಗೆ ನೆರವಾಗಿವೆ. ಆದರೆ ಭಾರತೀಯ ಮಹಿಳೆ ಇಂದಿಗೂ ತಾರತಮ್ಯಕ್ಕೆ ಬಲಿಯಾಗುತ್ತಿದ್ದಾಳೆ. ಲೈಂಗಿಕ ದೌರ್ಜನ್ಯ , ಅತ್ಯಾಚಾರ, ವರದಕ್ಷಿಣೆ ಕಿರುಕುಳ ಮುಂತಾದ ಸವಾಲುಗಳನ್ನು ಎದುರಿಸುತ್ತಿದ್ದಾಳೆ. ಹೆಣ್ಣು ಭ್ರೂಣ ಹತ್ಯೆ ಅವ್ಯಾಹತವಾಗಿ ನೆಡೆಯುತ್ತಿದೆ ಲಿಂಗಾನುಪಾತ ಕುಸಿದಿರುವುರು ಇದಕ್ಕೆ ಸಾಕ್ಷಿಯಾಗಿದೆ.

**ಲಿಂಗಾನುಪಾತ ಹೆಣ್ಣು ಮಕ್ಕಳ ಸರಾಸರಿ ಪ್ರಮಾಣ**

| ಕ್ರಮಸಂಖ್ಯೆ | ವರ್ಷ | ಅನುಪಾತ |
|---|---|---|
| 01 | 1901 | 972 |
| 02 | 1911 | 964 |
| 03 | 1921 | 955 |
| 04 | 1931 | 950 |
| 05 | 1941 | 945 |
| 06 | 1951 | 946 |
| 07 | 1961 | 941 |
| 08 | 1971 | 930 |
| 09 | 1981 | 933 |
| 10 | 1991 | 927 |
| 11 | 2001 | 933 |
| 12 | 2011 | 914 |

ಸಮಾಜದಲ್ಲಿನ ಸೌಹಾರ್ದಯುತವಾದ ವಾತಾವರಣದ ಬೆಳವಣಿಗೆಗೆ ಲಿಂಗಾನುಪಾತ ಅಂದರೆ 1000 ಗಂಡು ಮಕ್ಕಳಿಗೆ ಸರಿಸಮನಾಗಿ ಹೆಣ್ಣು ಮಕ್ಕಳ ಸಂಖ್ಯೆ ಇರಬೇಕು. ಆದರೆ, ಪ್ರತಿ ಸೆನ್ಸ್‌ಸ್ ನಲ್ಲಿ ಲಿಂಗಾನಪಾತದಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಕುಸಿಯುತ್ತಿರುವುದನ್ನು ಆಧಾರಗಳು ಪ್ರದರ್ಶಿಸುತ್ತವೆ. ಭ್ರೂಣ ಲಿಂಗ ಪತ್ತೆ ಶಿಕ್ಷಾರ್ಹ ಅಪರಾಧವೆನಿಸಿದ್ದರೂ ಸಹ ಹೆಣ್ಣು ಭ್ರೂಣ ಹತ್ಯೆ ನೆಡೆಯುತ್ತಿರುವುದು ಸಾಮಾನ್ಯವಾಗಿದೆ. ಈ ಲಿಂಗಾನುಪಾತದಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಕುಸಿಯುತ್ತಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ಅವಿದ್ಯಾವಂತರಿಗಿಂತ ವಿದ್ಯಾವಂತರಿಂದಲೇ ಈ ರೀತಿಯ ಕೃತ್ಯಗಳು ಹೆಚ್ಚಾಗಿ ನೆಡೆಯುತ್ತಿರುವುದು ಕಂಡುಬರುತ್ತಿದೆ. ಭಾರತೀಯ ಸಮಾಜದಲ್ಲಿ ಇಂದಿಗೂ ಪೋಷಕರು ಪುರುಷ ಸಂತಾನಕ್ಕೆ ತೋರಿಸುವ ಕಾಳಜಿ, ಸಂಭ್ರಮ ಸಡಗರ ಹೆಚ್ಚು. ಪ್ರಮಾಣದಲ್ಲಿ ಸ್ವಲ್ಪ ಏರುಪೇರುಗಳಿರಬಹುದು ಆದರೆ ಹೆಣ್ಣು ಮಕ್ಕಳ ಕುರಿತು ತಾರತಮ್ಯ ಧೋರಣೆ ಸಂಪೂರ್ಣವಾಗಿ ದೂರವಾಗಿಲ್ಲ.

ಹಾಗಾದರೆ ಈ ತಾರತಮ್ಯ ಮನೋಭಾವವೆಸಗಲು ಕಾರಣವೇನು ಎಂದು ನೋಡಿದಾಗ ಅದಕ್ಕೆ ಅನೇಕ ಕಾರಣಗಳಲ್ಲಿ ಬಹುಮುಖ್ಯವಾದ ಕಾರಣವೆಂದರೆ ಜವಾಬ್ದಾರಿ, ಈಗಲೂ ಹೆಣ್ಣು ಮಕ್ಕಳ ವಿವಾಹ, ಬಾಣಂತನದಂತಹ ಜವಾಬ್ದಾರಿಗಳು ಪೋಷಕರಿಗೆ ಹೊರೆಯನ್ನಾಗಿಸಿದೆ.
ಮಹಿಳೆಗೆ ಆಸ್ತಿಯಲ್ಲಿ ಸಮಪಾಲು ಇದ್ದರೂ ಸಹ ಅಲ್ಲಿಯೂ ತಾರತಮ್ಯವೆಸಗಲಾಗುತ್ತಿದೆ. ಎಷ್ಟೋ ಕುಟುಂಬಗಳಲ್ಲಿ ಮಹಿಳೆ ಉದ್ಯೋಗದಲ್ಲಿದ್ದರೂ ಸಹ ಮದುವೆಯ ಖರ್ಚಿನ ಪಾಲನ್ನು ಹಂಚಿಕೊಳ್ಳಲು ಅಥವಾ ತಾವು ಆ ಹಣಕಾಸಿನ ಹಾಗೂ ಇತರ ವೈವಾಹಿಕ ಜವಾಬ್ದಾರಿಗಳನ್ನು ಹಂಚಿಕೊಳ್ಳಲು ಸಿದ್ದರಿರುವುದಿಲ್ಲ, ಇಂತಹ ಭಾರತೀಯ ಪುರುಷ ಪ್ರಧಾನ ಸಮಾಜದಲ್ಲಿ ಈಗಲೂ ಅಸಮಾನತೆ ಮನೋಭಾವನೆಯೆ ಮುಂದುವರೆಯುವಿಕೆಗೆ ಇದು ಸಾಕ್ಷೀಭೂತವೆನಿಸಿದೆ.

2011 ರ ನ್ಯಾಷನಲ್ ಕ್ರೈಮ್ ರೆಕಾರ್ಡ ಬ್ಯೂರೋ ಪ್ರಕಾರ ಹೆಣ್ಣು ಮಕ್ಕಳ ಅಪಹರಣ ವೇಶ್ಯಾವಾಟಿಕೆಗೆ ಬಳಸಿಕೊಳ್ಳುತ್ತಿರುವ ಪ್ರಕರಣಗಳೂ ಸೇರಿದಂತೆ ಮಹಿಳೆಯರ ಮೇಲಿನ ಒಟ್ಟಾರೆ ದೌರ್ಜನ್ಯ ಪ್ರಕರಣಗಳ ಸಂಖ್ಯೆ 2,61,474, ದಾಖಲಾಗದಿರುವ ಸಾವಿರಾರು ಪ್ರಕರಣಗಳು ಕಣ್ಮರೆಯಾಗುತ್ತಿವೆ.

ಸಮೂಹ ಮಾಧ್ಯಮಗಳಲ್ಲಿ ಅನೇಕ ಸಂದರ್ಭಗಳಲ್ಲಿ ಮಹಿಳೆಯರನ್ನು ಅಶ್ಲೀಲವಾದ ಚಿತ್ರಗಳಲ್ಲಿ ಬಿಂಬಿಸಲಾಗುತ್ತದೆ.
ಹೆಣ್ಣು-ಗಂಡು ಎಂದು ತಾರತಮ್ಯವೆಸಗದೆ ಸಮಾನ ಕೆಲಸಕ್ಕೆ ಸಮಾನ ವೇತನ ಎಂಬುದು ಕಾನೂನು ಇದ್ದರೂ ಸಹ ಅನೇಕ ಖಾಸಗಿ ರಂಗಗಳಲ್ಲಿ ಇಂದಿಗೂ ಸಹ ತಾರತಮ್ಯ ಅವ್ಯಾಹತವಾಗಿ ನೆಡೆಯುತ್ತಿದೆ.

೭೩ ಮತ್ತು ೭4 ನೆಯ ತಿದ್ದುಪಡಿಯ ಮೂಲಕ ಪ್ರತಿ ಪಂಚಾಯಿತಿಯಲ್ಲಿ ಮೂರನೆಯ ಒಂದು ಭಾಗದ ಸ್ಥಾನಗಳ ಮೀಸಲಾತಿಯನ್ನು ಮಹಿಳೆಯರಿಗೆ ನೀಡಲು ಅವಕಾಶ ಕಲ್ಪಿಸಿದೆ. ಇದು ಮಹಿಳೆಯರ ರಾಜಕೀಯ ಪ್ರಾತಿನಿಧ್ಯಕ್ಕೆ ಅವಕಾಶವನ್ನಿತ್ತಿದೆ. ಸ್ಥಳೀಯ ಸರ್ಕಾರಗಳಲ್ಲಿ ಮಹಿಳಾ ಪ್ರತಿನಿಧಿಗಳಿದ್ದಾರೆ. ಆದರೆ ಎಷ್ಟೋ ಕಡೆಗಳಲ್ಲಿ ಹೆಸರಿಗೆ ಮಾತ್ರ ಮಹಿಳಾ ಪ್ರತಿನಿಧಿಗಳಿದ್ದಾರೆ ಅಧಿಕಾರ, ಸ್ಥಾನಮಾನಗಳೆಲ್ಲವೂ ಆಕೆಯ ಪತಿ, ಇಲ್ಲವೇ ಪುರುಷ ಸಂಭಂಧಿಕರು ಚಲಾಯಿಸುತ್ತಿದ್ದಾರೆ.

ಬಾಲ್ಯ ವಿವಾಹ ವಿರೋಧಿ ಕಾಯಿದೆ ಅನುಷ್ಠಾನದಲ್ಲಿದ್ದರೂ ಭಾರತದ ಅನೇಕ ಕಡೆಗಳಲ್ಲಿ ಯಥೇಚ್ಛವಾಗಿ ಬಾಲ್ಯ ವಿವಾಹದ ಪ್ರಕರಣಗಳು ನೆಡೆಯುತ್ತಿವೆ.

ವರದಕ್ಷಿಣೆ ನಿಷೇಧ ಕಾಯಿದೆ ಜಾರಿಯಲ್ಲಿದ್ದರೂ ಹೆಣ್ಣೆತ್ತವರು ಲಕ್ಷಾಂತರ ರೂಪಾಯಿಗಳನ್ನು ಮದುವೆಗಾಗಿ ಖರ್ಚು ಮಾಡುತ್ತಿರುವುದು ಜಗಜ್ಜಾಹಿರವಾಗಿದೆ. ಹಣದ ರೂಪದಲ್ಲಿ ಇಲ್ಲದಿದ್ದರೂ ತಮ್ಮ ತಮ್ಮ ಅಂತಸ್ತಿಗೆ ತಕ್ಕಂತೆ ವರನಿಗೆ ಉಡುಗೊರೆಗಳನ್ನು ನೀಡುವುದು ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಅದರ ಬೇಡಿಕೆಯನ್ನು ವರನ ಕಡೆಯಿಂದ ಬರುವುದು ಸಹಜವಾಗಿದೆ. ಇದು ಹೆಣ್ಣೆತ್ತವರಿಗೆ ಖರ್ಚಿನ ಹೊರೆ ಹೊರಿಸಿದಂತಾಗಿದೆ.

ಸಮಾನ ಅವಕಾಶಗಳಿದ್ದಾಗ್ಯೂ ಮಹಿಳೆ ತನಗೆ ಸಿಗುವ ಅವಕಾಶಗಳಿಂದ ದೂರವಾಗುತ್ತಿದ್ದಾಳೆ. ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ಕರ್ನಾಟಕ ಪದವಿ-ಪೂರ್ವ ಶಿಕ್ಷಣ ಇಲಾಖೆ, ಹಾಗೂ ಕಾಲೇಜು ಶಿಕ್ಷಣ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸಿರುವ ಹಾಗೂ ನಿರ್ವಹಿಸುತ್ತಿರುವವರ ಮಹಿಳಾ ಉಪನ್ಯಾಸಕರಲ್ಲಿ ನೂರಾರು ಮಂದಿಯಲ್ಲ ಸಾವಿರಾರು ಮಂದಿ ತಮಗೆ ಸಿಗುತ್ತಿದ್ದ ಮುಂಬಡ್ತಿಯನ್ನು ನಿರಾಕರಿಸಿದ್ದಾರೆ. ಸಾಮಾನ್ಯವಾಗಿ ಮುಂಬಡ್ತಿಯು ನೌಕರರಲ್ಲಿ ಉತ್ಸುಕತೆಯನ್ನು ಆಸಕ್ತಿಯನ್ನು, ಗೌರವವನ್ನು ಸ್ಥಾನಮಾನವನ್ನು ವೃದ್ಧಿಸುತ್ತದೆ. ಆದುದರಿಂದಲೇ ತಜ್ಞರ ಪ್ರಕಾರ ನೌಕರರಿಗೆ ಹೆಚ್ಚು ಹೆಚ್ಚು ಬಡ್ತಿಯ ಅವಕಾಶಗಳಿರಬೇಕು. ಆದರೆ ವೇತನದಲ್ಲಿ ಹೆಚ್ಚಳ, ಸ್ಥಾನಮಾನದಲ್ಲಿನ ಹೆಚ್ಚಳ, ಕೆಲಸದ ವಾತಾವರಣದಲ್ಲಿ ಬದಲಾವಣೆ, ಲವಲವಿಕೆಯನ್ನು ಮನೋಸ್ಥೈರ್ಯವನ್ನು ವೃದ್ಧಿಸುವಂತಹ ಮುಂಬಡ್ತಿಯ ಅವಕಾಶಗಳನ್ನು ಸಾವಿರಾರು ಮಂದಿ ಉಪನ್ಯಾಸಕರು ಒಪ್ಪದಿರಲು ಕಾರಣ ಕೌಟುಂಬಿಕ ಜವಾಬ್ದಾರಿಯೊಂದಿಗೆ ಸಂಸ್ಥೆಯ ಮುಖ್ಯಸ್ಥರ ಜವಾಬ್ದಾರಿ ಇವುಗಳಲ್ಲಿ ಆಕೆ ತನ್ನ ಕುಟುಂಬಕ್ಕೆ ಮೊದಲ ಆದ್ಯತೆಯನ್ನು ನೀಡಿ ತನಗೆ ಸಿಗುವ ಉನ್ನತ ಅವಕಾಶದಿಂದ ದೂರವಾಗಿದ್ದಾಳೆ.

## ಫಲಿತಾಂಶಗಳು

ಮಹಿಳಾ ಪ್ರಾಬಲ್ಯತೆಗೆ ಸಂವಿಧಾನ, ಸರ್ಕಾರಗಳು ಅನೇಕ ಕಾಯಿದೆಗಳ ಮೂಲಕ ಅನುವು ಮಾಡಿಕೊಟ್ಟಿರುವುದರಿಂದ ಹಿಂದೆ ಮಹಿಳಾ ಪರವಾಗಿ ಇದ್ದಂತಹ ಧೋರಣೆಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಶಿಕ್ಷಣದಲ್ಲಿ ಪೋಷಕರು ಗಂಡು-ಹೆಣ್ಣು ಎಂಬ ಭೇಧ ಭಾವವಿಲ್ಲದೆ ಮಕ್ಕಳಿಗೆ ಸಮಾನ ಶಿಕ್ಷಣವನ್ನು ದೊರಕಿಸಿಕೊಡುತ್ತಿದ್ದಾರೆ. ಮದುವೆಯಾಗಿ ಗಂಡನ ಮನೆಗೆ ಹೋಗುವ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುವುದು ವ್ಯರ್ಥ ಎಂಬ ಈ ಹಿಂದೆ ಸಮಾಜದಲ್ಲಿ ಇದ್ದಂತಹ ಭಾವನೆ ದೂರವಾಗಿದೆ.

ಮಹಿಳೆಯರು ತಮ್ಮ ಅವಕಾಶಗಳನ್ನು ಸದ್ವಿನಿಯೋಗ ಪಡಿಸಿಕೊಳ್ಳುವಲ್ಲಿ ಇರುವ ಅಡಚಣೆಗಳು ಎಂದರೆ ಮಹಿಳೆಯರು ತಮ್ಮ ಮನೆ, ಮಕ್ಕಳ, ಗಂಡನ, ಹಿರಿಯರ, ಆರೈಕೆಯಲ್ಲಿ ಹೆಚ್ಚು ಸಮಯವನ್ನು

ವ್ಯಯಿಮಾಡುತ್ತಾರೆ. ಆರೋಗ್ಯದ ಕಡೆಗೆ ಕನಿಷ್ಠ ಗಮನಹರಿಸುತ್ತಾರೆ. ಆತ್ಮವಿಶ್ವಾಸದ ಕೊರತೆ, ಹಣಕಾಸಿನ ಸಮಸ್ಯೆಯಿಂತಹ ಅನೇಕ ಸವಾಲುಗಳನ್ನು ಎದುರಿಸುತ್ತಿದ್ದಾಳೆ. ಉದ್ಯೋಗದ ಸ್ಥಳಗಳಲ್ಲಿ ಅದರಲ್ಲಿಯೂ ಖಾಸಗಿ ರಂಗಗಳಲ್ಲಿ ಮಹಿಳೆಯರ ಮೇಲೆ ಅನೇಕ ರೀತಿಯ ಲೈಂಗಿಕ ದೌರ್ಜನ್ಯಗಳು ಅವ್ಯಾಹತವಾಗಿ ನಡೆಯುತ್ತಿವೆ. ಇದಕ್ಕೆ ಮಿಟೂ ಆಂದೋಲನವೇ ಸಾಕ್ಷಿಯಾಗಿದೆ

ನಮ್ಮ ಸಂವಿಧಾನವು ಸಮಾನ ಅವಕಾಶಗಳನ್ನು ನೀಡಿದ್ದರೂ ಸಹ ಅಸಮಾನತೆ ಸಮಾಜದ ಮನೋಭಾವನೆ ಸಂಪೂರ್ಣವಾಗಿ ಹೋಗಿಲ್ಲ ಮಹಿಳೆಯರನ್ನು ಪುರುಷರಿಗೆ ಸಮಾನವಾಗಿ ಪರಿಗಣಿಸಲಾಗುತ್ತಿಲ್ಲ ಈಗಲೂ ಅನೇಕ ಕಡೆಗಳಲ್ಲಿ ಮಹಿಳೆಯನ್ನು ದ್ವಿತೀಯ ದರ್ಜೆಯ ಹಾಗೂ ಪುರುಷರ ಮೇಲೆ ಅವಲಂಬಿತಳಾಗಿದ್ದು ಮಹಿಳೆ ನಿರ್ಧಾರಗಳನ್ನು ತೆಗೆದುಕೊಳ್ಳುವಷ್ಟು ಸ್ವತಂತ್ರವಾಗಿದ್ದಾಳೆ ಎನ್ನುವುದನ್ನು ಪುರುಷ ಪ್ರಧಾನ ಭಾರತೀಯ ಸಮಾಜ ಸಂಪೂರ್ಣವಾಗಿ ಒಪ್ಪಿಕೊಂಡಿಲ್ಲ.

ಕೌಟುಂಬಿಕ ಜವಾಬ್ದಾರಿ ಹಾಗೂ ಹೊರಗೆ ದುಡಿಯುವ ಉದ್ಯೋಗಗಳೆರಡೂ ಆಕೆಗೆ ಇನ್ನಷ್ಟು ಹೊರೆಯನ್ನಾಗಿಸಿವೆ. ಮಹಿಳೆಗೆ ಪ್ರಕೃತಿಯನ್ನು ಹೆಣ್ಣಿಗೆ ಹೋಲಿಸಲಾಗಿದೆ. ನದಿಗಳು, ದೇಶಗಳನ್ನು ಸಹ ಸ್ತ್ರೀ ಎಂದೇ ಬಿಂಬಿಸಲಾಗಿದೆ. ಭೂದೇವಿ, ಭಾರತಾಂಬೆ, ಕರ್ನಾಟಕ ಮಾತೆ, ಹೀಗೆ ಹೆಣ್ಣಿಗೆ ಸಹನಾಶೀಲೆ ಎಲ್ಲದರಲ್ಲೂ ಹೊಂದಿಕೊಂಡು ಹೋಗುವ ಗುಣವನ್ನು ಚಿಕ್ಕಂದಿನಿಂದಲೇ ಕರಗತ ಮಾಡಿಸಲಾಗುತ್ತದೆ.

## ಸಲಹೆಗಳು

ಮಹಿಳೆ ಶಿಕ್ಷಣಕ್ಕೆ ಒತ್ತು ನೀಡಬೇಕು ಕೇರಳ ರಾಜ್ಯದಲ್ಲಿರುವಂತೆ ಶಿಕ್ಷಣ, ಲಿಂಗಾನುಪಾತ, ಎಲ್ಲ ಕಡೆ ಬರುವಂತಾಗಬೇಕು. ತನ್ನ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುವತ್ತ ಮಹಿಳೆ ಗಮನಹರಿಸಬೇಕು. ತನ್ನಲ್ಲಿರುವ ಪುರುಷ ಅವಲಂಬಿತಳು ಎಂಬ ಮಾನಸಿಕ ಗುಲಾಮಗಿರಿತನದ ಕೀಳರಿಮೆಯ ಭಾವನೆಯಿಂದ ದೂರ ಬರಬೇಕು. ತನಗಿರುವ ಸಮಾನ ಹಕ್ಕುಗಳನ್ನು ಪಡೆದುಕೊಳ್ಳುವಂತಾಗಬೇಕು ಇದಕ್ಕೆ ಶಿಕ್ಷಣ, ತರಬೇತಿಯ ಅವಶ್ಯಕತೆ ಇದೆ. ಸ್ವತಂತ್ರವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಕೌಶಲ್ಯಗಳನ್ನು ಬೆಳೆಸಿಕೊಂಡು ತನ್ನ ಹಕ್ಕುಗಳನ್ನು ಚಲಾಯಿಸುವಂತಾಗಬೇಕು.

ಮಹಿಳೆಯರಿಗೆ ಉದ್ಯೋಗದಲ್ಲಿ ಮಾತ್ರವಲ್ಲದೆ ಶಾಸಕಾಂಗಗಳಲ್ಲಿ ಸಹ ಮೀಸಲಾತಿಯನ್ನು ಕೊಡಬೇಕು

## ಉಪಸಂಹಾರ

ಭಾರತದಲ್ಲಿ ಐತಿಹಾಸಿಕವಾಗಿ ಗೌರವಯುತವಾದ ಸ್ಥಾನಮಾನಗಳನ್ನು ಹಾಗೂ ಆದುನಿಕ ಯುಗದಲ್ಲಿ ಸಮಾನ ಅವಕಾಶಗಳನ್ನು ಮಹಿಳೆಯರಿಗೆ ನೀಡಲಾಗಿದೆ ಆದರೆ ಇಂದಿಗೂ ಮಹಿಳೆಯರು ಅನೇಕ ಸವಾಲುಗಳನ್ನು ಎದುರಿಸುತ್ತಿದ್ದಾರೆ.

ಮಹಿಳೆಯರ ಮೇಲಿನ ದೌರ್ಜನ್ಯವನ್ನು ಹೋಗಲಾಡಿಸಲು ಸಮಾಜದ ಎಲ್ಲರೂ ಕೈಜೋಡಿಸಬೇಕು. ಮಹಿಳೆಯರ ಸಮಸ್ಯೆ ಇಡೀ ಸಮಾಜದ ಸಮಸ್ಯೆ ಎಂಬಂತೆ ಪರಿಭಾವಿಸಬೇಕು. ಲಿಂಗಾನುಪಾತದ ವ್ಯತ್ಯಾಸವನ್ನು ಕೊನೆಗಾಣಿಸಬೇಕು. ಭಾರತೀಯ ಮಹಿಳೆ ತನ್ನ ಕುಟುಂಬದ ಕೆಲಸ ಕಾರ್ಯಗಳಿಗೆ ಮೊದಲ ಆದ್ಯತೆಯನ್ನು ನೀಡುತ್ತಾಳೆ ಕುಟುಂಬದ ಎಲ್ಲ ಸದಸ್ಯರ ಪೋಷಣೆಗೆ ಹೆಚ್ಚು ಸಮಯವನ್ನು ಭರಿಸುತ್ತಾಳೆ. ತನ್ನ ಅಭಿವೃದ್ಧಿಯ ಕಡೆಗೆ ಹೆಚ್ಚು ಗಮನವನ್ನು ನೀಡುವುದಿಲ್ಲ. ಹಾಗಾಗಿ ಮಹಿಳೆಯರು ತಮ್ಮ ಅವಕಾಶಗಳನ್ನು ಸದ್ವಿನಿಯೋಗ ಪಡಿಸಿಕೊಳ್ಳುವಲ್ಲಿ ಇರುವ ಅಡಚಣೆಗಳನ್ನು ಹೋಗಲಾಡಿಸಲು ಹಾಗೂ ಮಹಿಳೆಗೆ ತನ್ನ ಹೊರಗಿನ ಉದ್ಯೋಗದಲ್ಲಿ ಸಮರ್ಥವಾಗಿ ಕಾರ್ಯನಿರ್ವಹಿಸಿ ಅಭಿವೃದ್ಧಿಯನ್ನು ಹೊಂದಲು ಕುಟುಂಬದ ಸಹಕಾರವು ಅತ್ಯವಶ್ಯಕವಾಗಿದೆ. ದೇಶದ ಅಭಿವೃದ್ಧಿಯಲ್ಲಿ ಮಹಿಳಾ ಒಳಗೊಳ್ಳುವಿಕೆಯು ಅತ್ಯಂತ ಅಗತ್ಯಾಂಶಗಳಲ್ಲಿ ಒಂದಾಗಿದೆ

## References

1. Constituent Assembly Debates
2. Agnihothri.S.B, MISSING FEMALES, Economic & Political Weekly, 1995.
3. Asthana,Pratima, WOMEN'S MOVEMENT IN INDIA,Delhi, Vikas Publishing House, 1974.
4. Basu.D.D INTRODUCTION TO THE CONSTITUTION OF INDIA,
5. Dr.Gupta, C.B & Dr. N.P. Srinivasan, 2001, Entrepreneurship Development in India Sultan Chand & Sons.
6. Evans, Sara M,PERSONAL POLITICS;THE ROOTS OF WOMEN'S LIBERATION IN THE CIVIL RIGHTS MOVEMENT AND THE LEFT, New York, Random House,1980.
7. Mahadev Menon, THE RIGHTS OF CHILDREN, 1999, The Hindu.
8. Mahendra Dev.S, ECONOMIC Liberalization and employment in South Asia, EPW Jan 2000 Part I&II
9. Mahendra Dev.S, ECONOMIC Liberalization and employment in South Asia, EPW Jan 2000 Part I&II
10. Premi K. Mahendra THE MISSING GIRL CHILD , EPW, May 2001
11. Raman.S.A, WOMEN'S EDUCATION, Encyclopedia of India (vol-4),edited by Stanley Wolpert, Thomson Gale:ISBN0-684-31353-7.
12. Rani Padmaja EDUCATION FOR EMPOWERMENT OF WOMEN: A two –way process of consciousness and development at grassroots Journal of education and social change, vol-III, No.16, July-Sept, 1995.
13. Shelly J.Correll, GENDER INEQUAITY IN EDUCATION 2008-10
14. Sripati,v. and Thiruvengadam,A.K(2004), INDIA;CONSTITUTIONAL AMENDMENT MAKING THE RIGHT TO EDUCATION A FUNDAMENTAL RIGHT, International Journal of Constitutional Law,2(1):, Oxford University Press.
15. Srivastava Gouri and Mona Yadav REMOVE GENDER DISPARITY IN EDUCATION , Social Welfare, September, 2001
16. Women Empowerment, Voice Research, Volume-2, issue-2, Sept 2013, ISSN No. 2277-7733